ಕರ್ನಾಟಕ ವಿಧಾನಸಭೆ

ಮಂಗಳವಾರ 20ನೇ ಜೂನ್ 2006 ರಂದು

ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ 11 ಗಂಟೆ 38 ನಿಮಿಷಕ್ಕೆ ಸಮಾವೇಶಗೊಂಡಿತು.

ಅಧ್ಯಕ್ಷರು (ಶ್ರೀ ಕೃಷ್ಣರವರು) ಅಧ್ಯಕ್ಷ ಪೀಠವನ್ನು ಅಲಂಕರಿಸಿದರು.

1. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯ.

ವಿಷಯ: ಬಸ್ ದರ ಏರಿಕೆಯ ಬಗ್ಗೆ.

ಶ್ರೀ ವಾಟಾಳ್ ನಾಗರಾಜ್: ಬಸ್ ದರ ಏರಿಕೆಯ ಬಗ್ಗೆ ಸರ್ಕಾರ ಒಂದು ಹೇಳಿಕೆಯನ್ನು ಕೊಡಬೇಕು, ಬಸ್ ದರವನ್ನು ತೀವ್ರವಾಗಿ ಏರಿಸಿದ್ದಾರೆ, ಚರ್ಚೆಗೆ ಅವಕಾಶ ಮಾಡಿಕೊಡಬೇಕು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಬಸ್ ದರ ಏರಿಸಿದ್ದಾರೆ. ಅದಕ್ಕೆ ಚರ್ಚೆಗೆ ಅವಕಾಶ ಮಾಡಿಕೊಡಬೇಕು.

2. ಕಾಂಗ್ರೆಸ್ ಸದಸ್ಯರ ಧರಣಿ.

ವಿಷಯ: ನಿಲುವಳಿ ಸೂಚನೆಗೆ ಅನುಮತಿ ನೀಡಲು ಒತ್ತಾಯ.

(ಈ ಸಂದರ್ಭದಲ್ಲಿ ಕಾಂಗ್ರೆಸ್ ಸದಸ್ಯರೆಲ್ಲರೂ ಸದನದ ಬಾವಿಯಲ್ಲಿ ಧರಣಿ ನಿಂತರು)

ಶ್ರೀ ಕೆ.ಎನ್. ರಾಜಣ್ಣ: ರಾಷ್ಟ್ರೀಯ ಪಕ್ಷದ ಸದಸ್ಯರಾಗಿದ್ದುಕೊಂಡು, ಸ್ಪೀಕರ್‌ರವರ ನಿರ್ಣಯವನ್ನು ಪ್ರಶ್ನೆ ಮಾಡುವ ಕೆಲಸವನ್ನು ಮಾಡುತ್ತಿದ್ದೀರಿ; ನಿಮಗೆಲ್ಲಾ ನಾಚಿಕೆಯಾಗಬೇಕು.

(ಗೊಂದಲ)

ಅಧ್ಯಕ್ಷರು: ಈಗ ಮಾನ್ಯ ಸದಸ್ಯರು ಏತಕ್ಕೆ ಈ ವೆಲ್‌ನೊಳಗೆ ಬಂದ್ದೀದ್ದೀರೆಂಬುದು ನನಗೆ ಅರ್ಥವಾಗುತ್ತಿಲ್ಲ, ಏಕೆಂದರೆ ನೀವೇನು ನಿನ್ನೆ ನಿಲುವಳಿ ಸೂಚನೆಯನ್ನು ತಂದಿದ್ದರೋ, ಅದು ನಿಯಮಾವಳಿ ಪ್ರಕಾರ ಲ್ಯಾಪ್ಸ್ ಆಗಿದೆ, ಇವತ್ತು ನಿಯಮ 69ರ ಕೆಳಗಡೆ ನಾನು ಕನ್ಸರ್ಟ್ ಮಾಡಿ ಮಾತನಾಡಲು ನಿಮಗೆ ಅವಕಾಶ ಮಾಡಿಕೊಟ್ಟಿದ್ದೆ, ಇವತ್ತು ಲೀಸ್ಟ್ ಆಫ್ ಬಿಸನೆಸ್‌ನಲ್ಲಿದೆ, ದಯಮಾಡಿ ಮಾನ್ಯ ಸದಸ್ಯರು ತಮ್ಮ ತಮ್ಮ ಆಸನಗಳಿಗೆ ತೆರಳಿ ಅದರ ಮೇಲೆ ಚರ್ಚೆ ಆರಂಭ ಮಾಡಬೇಕು. ಆಟೊಮ್ಯಾಟಿಕ್ ಆಗಿ ನಿಮ್ಮ ನಿಲುವಳಿ ಸೂಚನೆ ಲ್ಯಾಪ್ಸ್ ಆಗಿ ಹೋಯಿತು. ಅದು ನಿನ್ನೆಯೇ ಲ್ಯಾಪ್ಸ್ ಆಗಿದೆ. ಆ ಕಾರಣದಿಂದ ತಾವು ದಯಮಾಡಿ ನೀವು ಈ ರೀತಿಯಲ್ಲಿ ಸದನದ ಕಲಾಪಕ್ಕೆ ಅಡ್ಡಿ ಮಾಡುವುದು